

ಚಿತ್ರ: ಈಶ್ವರ ಬಡಿಗೇರ್

ಹೇಳಲಾರಂಭಿಸಿದ.

'ಎಪ್ಪಾ!.. ನಂಗ ಐದು ಗಂಡು ಮಕ್ಳು ಅದಾರ. 9 ಎಕರೆ ಹೇರಿ ಹೊಲ ಐತಿ. ಇಬ್ರು ಹೆಣ್ಣ್ ಮಕ್ಳು, ಇಬ್ರೂದು ಲಗ್ನ ಮಾಡಿ ಕೊಟ್ಟೇನಿ. ಅಟ್ಟೂ ಗಂಡು ಮಕ್ಕಳದ್ದು ಲಗ್ನ ಆಗೈತಿ, ಒಬ್ಬಾಂವ್ನ ನೌಕ್ರಿ ಬರೋಗಂಟ ಸಾಲಿ ಓದ್ಸಿನಿ, ಒಬ್ಬಾಂವ ದಿಡ್ ನೂರು ಕುರಿ ಕಾಯ್ತಾನ. ಹಿರಿಯಂವಾ ಕಮತಾ ಮಾಡ್ತಾನ್ರಿ, ಒಬ್ಬಾಂವ ಹೆಂತಿ ಮಕ್ಳನ್ನ ಕಟ್ಟಿಕೊಂಡು ಗವಾದಾಗ ದುಡಿಯಾಕ ಹೋಗಿ ಅಲ್ಲೆ ಸಟ್ಲ್ ಆಗ್ಯಾನ. ಸಣ್ಣಂವಾ ಬ್ಯಾರೆ ಕುಲ್ದ್ ಹೆಣ್ಣ್ ತಗೊಂಡು ಓಡಿ ಹೋಗ್ಯಾನ, ಅಂವ ಎಲ್ಲಿ ಅದಾನಂತ ಇವತ್ತಿಗೂ ಪತ್ತೆ ಆಗಿಲ್ರಿ. ಹಿಂಗ! ದಿಕ್ಕಿಗೊಬ್ರು, ದಿವಾಣ ಕ್ಕೊಬ್ರು ತಮ್ಮ ತಮ್ಮ ಪಾಡಿಗೆ ತಾವು ಅದಾರ್ರಿ, ನಾನು ನನ್ನ ಹೆಂತಿ ಕಮತಾ ಮಾಡೊ ಹಿರೇ ಮಗನಂತಾವ ಇದ್ವಿ, ಮಕ್ಳಿಗೆ ಹೆಂತ್ಯಾರು ಬಂದ್ ಮೇಲೆ ನಮ್ಮನ್ನ ಕಡೀಗೆ ಚಿಮ್ಮಿಬಿಟ್ರ್ಯಾರಿ, ಒಬ್ರೂ ಕಣ್ಣಾಗ್ ಹಾಕ್ಕೊಳ್ಳೊಲ್ರಿ. ಮಗನ ಹೆಂತಿ ಕೂಳಿಗೆ ಮೂಲ ಆಗ್ಯಾವ ಮುದೆ ಮೂಳಗೊಳು ಅಂತ ನಮಗ ತುತ್ತು ರೊಟ್ಟಿ ಕೊಡ್ಲೊಳ್ಳು. ಚಾವ್ ಕುಡ್ಯಾಕ ಎಲ್ಡ್ ರೂಪಾಯಿ ಕೇಳಿದ್ರ ಮಗ ಕಿವ್ಯಾಗ ಹಾಕ್ಕೊಳ್ಳಲ್ಲ. ಸೊಸ್ಯಾರು ಹೇಟ್ ಮಾತು ಹೇಟ್ ಮಾತು ಅಂತಾರ. ನಾಯಿಗೂ ಕಡೆ ಆಗೈತ್ರಿ ನಮ್ಮ ಬಾಳೇ.. ನಮ್ಮಪ್ಪ ಗಳ್ಸಿದ ಆಸ್ತಿನ ಉಪವಾಸ ವನವಾಸ ಬಿದ್ದು ಉಳ್ಸಿಕೊಂಡು ಬಂದಿವಿ. ಮಕ್ಳನ್ನ ಉಣಿಸಿ ತಿನಿಸಿ, ಯೇಲು ಯಂಜ್ಲ ಬಳ್ದು ದೊಡ್ಡವ್ರನ್ನ್ ಮಾಡಿವಿ. ಹೆಂತ್ಯಾರು ಬಂದ್ ಮೇಲೆ ತಂದಿ ತಾಯಿ ಮಕ್ಳಿಗೆ ಬ್ಯಾಡಾಗಿವ್ರಿ.

ಸೊಸ್ಯಾರು ಮುಂಜಾಲೆ ಒಂದೊತ್ತು ಉಣ್ಣಾಕ್ಕಿಟ್ಟು ಎಲ್ಲಾ ಅಡಿಗೆ ಒಳಗ ಇಟ್ಕೊಂಡು ಕಿಲಿ ಹಾಕ್ಕೊಂಡು ಅಡವಿಗೆ ಹೋಗಿ ಬಿಡ್ತಾರ್ರಿ. ಇದ್ನೆಲ್ಲ ಕಂಡು ಬ್ಯಾಸತ್ತು ಜನ್ಮ ಸಾಕಂತ ಮನಸ್ಸು ಖಟಿ ಮಾಡ್ಕೊಂಡು ನನ್ನ ಹೆಂತಿ ಹೇಳ್ದ ಕೇಳ್ದ ಮನಿ ಬಿಟ್ಟು ಮೂರು ದಿನಾತ್ರಿ. ಮಕ್ಳಿಗೆ 'ನಿಮ್ಮವ್ವ ಎಲ್ಲಿಗೆ ಹೋದ್ಲೋ ಏನೋ ಹುಡುಕ್ರಪಾ, ಪುಣ್ಯ ಬರ್ತೈತಿ, ನಿಮ್ಮ ಕಾಲು ಬೀಳ್ತೀನಿ' ಅಂತ ದೈನೇಶಿ ಬಿದ್ದಿನ್ರಿ. 'ಆಕಿ ಎಲ್ಲಿಗೇರ ಎಲ್ಲಿಗೆ ಹೋಗಿರ್ತಾಳ, ಹೋದ್ರ ತನ್ನ ಮಗಳ ಮನಿಗೆ ಹೋಗಿರ್ತಾಳ, ಅಲ್ಲೇರ ಎಟ್ಟು ದಿನಾಂತ ಒಳಕಳ್ತಾಳ ಬಿಡು' ಅಂತ ಹೀರಿ ಸೊಸಿ ಚುಚ್ಚುಮಾತು ಅಂದುಬಿಟ್ಲು. ಮಕ್ಳಂತೂ ತುಟಿ ಪಿಟಕ್ ಅನ್ನಲ್ಲಿಲ್ರಿ..' ಅಂತ ಕಣ್ಣಲ್ಲಿ ನೀರು ತಂದು ಗೋಳೋ ಅಂತ ಅತ್ತುಬಿಟ್ಟ. ಬಸ್ ನಲ್ಲಿದ್ದವರು ವೃದ್ಧನನ್ನೇ ಪಿಳಿ ಪಿಳಿ ನೋಡುತ್ತಿದ್ದರು. ಎಲ್ಲರ ಕರಳು ಚುರ್ರ್ ಎಂದಿತು. ಆತನ ಮೇಲೆ ಅದೇನೋ ಅನುಕಂಪ ಬಂದಂತಾಯಿತು.

ವೃದ್ಧ ಅಳುತ್ತಲೇ ಕಣ್ಣೆರೊರೆಸಿಕೊಳ್ಳುತ್ತ ಮತ್ತೆ ತನ್ನ ಜೀವನ ವೃತ್ತಾಂತವನ್ನು ಮುಂದುವರೆಸಿದ. 'ನನ್ನ ಜೀವ ನಿಂತಿರಲಿಲ್ರಿ. ಆಕಿಗಿ ಬಿಜಾಪುರದ ಮಗಳ ಮ್ಯಾಲೆ ಬಲು ಜೀವ ಇತ್ರಿ. ಅಲ್ಲಿಗೇನರ ಹೋಗ್ಯಾಳೆನೋ ಅಂತ ಬಿಜಾಪುರಕ ಹೋಗಾಕ ಮಗನ್ನ ರೊಕ್ಕ ಕೇಳಿನ್ರಿ, 'ರೊಕ್ಕ ಇಲ್ಲ, ಅಲ್ಲೇನ್ ಇಟ್ಟಿ? ಅವ್ರಿಗೀಟು ಬ್ಯಾಸರಾಗಾಕ ಹೊಂಟಿಯನು? ಇಲ್ಲೆ ಬಿದ್ದಿರು' ಅಂದುಬಿಟ್ಟುನ್ರಿ. ಹೆಂಗೊ ನಮ್ಮೂರಿಂದ ಗದಗಿನ ತಂಕ ಬಂದು ಬಸ್ ಸ್ಟ್ಯಾಂಡಿನ್ಯಾಗ ಭಿಕ್ಷೆ ಬೇಡಿನ್ರಿ. ನಿಮ್ಮಂತ ಪುಣ್ಯಾತ್ಮರು ಕೊಟ್ಟಿದ್ದು 90 ರೂಪಾಯಿ ಆಗೇತ್ರಿ' ಘಳ ಘಳ ಅಳಲಾರಂಭಿಸಿಬಿಟ್ಟ. ಕೇಳುತ್ತಿದ್ದವರಿಗೆ ಮನ ಕರಗಿ ತೇವಗೊಂಡಂತಾಯಿತು. ನನಗೂ ಕರಳು ಕಿತ್ತು ಬಂದಂತಾಯಿತು.

ಸಂದರ್ಶನದಲ್ಲಿ ತೊಡಗಿದ್ದ ಯಜಮಾನ ಮನುಷ್ಯ ಮರು ಮಾತಾಡದೆ ಜೇಬಿಗೆ ಕೈ ಇಳಿಸಿದವನೇ 50 ರೂಪಾಯಿ ನೋಟನ್ನು ವೃದ್ಧನಿಗೆ ಕೊಟ್ಟುಬಿಟ್ಟ. ಅದುವರೆಗೂ ಸಿನಿಮಾ ನೋಡುವಂತೆ ನೋಡುತ್ತಿದ್ದ ಪ್ರಯಾಣಿಕರು ತಮ್ಮ ಕೈಲಾದಷ್ಟು ಕೊಟ್ಟುಬಿಟ್ಟರು. ವೃದ್ಧನಿಗೆ ಟಿಕೇಟ್ ಕೊಡಿಸಿ ಮಾನವಿಯತೆ ಮೆರೆದರು. ಮುತ್ತು ಕೊಡೂರು ಬಂದಾಗ ತುತ್ತು ಉಣಿಸಿದವರನ್ನು ಬೀದಿಗೆ ತಳ್ಳಿದ ಮಕ್ಕಳಿಗೆ ತಲೆಗೊಂದು ಮಾತು ಮಾತಾಡಿದರು. ಹಿಡಿ ಶಾಪ ಹಾಕಿದರು. ಕಂಡಕ್ಟರ್ ಟಿಕೇಟ್ ಹರಿದುಕೊಟ್ಟು ಸುಮ್ಮನಾದ. ಬಸ್ ನ ವೇಗ ಹೆಚ್ಚಾದಂತೆಲ್ಲಾ ವೃದ್ಧನ ಮನದ ದುಗುಡ ಹೆಚ್ಚುತ್ತಾ ಕಣ್ಣೀರಾಗಿ ಜಿನುಗುತ್ತಲೇ ಇತ್ತು! ■